ಅವನು ಅದರತ್ತ ನೋಡಿದ. ಸ್ಪಷ್ಟವಾಗಿ ಏನೂ ಕಾಣಲಿಲ್ಲ. ಸಿಗರೇಟು ಮುಗಿಯುತ್ತಾ ಬಂದಿತ್ತು. ಅದನ್ನು ಕೆಳಗೆ ಹಾಕಿ ಬೂಟುಗಾಲಿನಿಂದ ಹೊಸಕಿ ಹಾಕಿದ.

ಬೆಂಚಿನ ಮೇಲೆ ಗಾಳಿಗೆ ಕೂತ ಅವನಿಗೆ ವ್ಯಾಯಾಮದಿಂದ ಆದ ಆಯಾಸ ಸುಧಾರಿಸುವ ತನಕ ಏಳಬೇಕೆಂದು ಅನ್ನಿಸಲಿಲ್ಲ. ಎರಡು ಖಾರಾ ಬನ್ನುಗಳಿಂದ ಅವನ ಹಸಿವೆ ಹಿಂಗಿರಲಿಲ್ಲ. ಅವನ ಮನೆಯಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಒಂದು ದೋಸೆಯ ಹೋಟೆಲಿತ್ತು. ಅಲ್ಲಿಯ ಮಸಾಲೆ ದೋಸೆ ಬಹಳ ಖ್ಯಾತಿ ಪಡೆದಿತ್ತು. ಆ ಖ್ಯಾತಿಯಿಂದಾಗಿ ಅಲ್ಲಿಗೆ ಚಿತ್ರನಟರು, ರಾಜಕಾರಣಿಗಳು ಎಲ್ಲ ಬರುವುದಿತ್ತು. ಸಿಎಂ ಕೂಡಾ ತನ್ನ ಸಂಸಾರ ಸಮೇತ ಬಂದು ಅಲ್ಲಿ ಮಸಾಲೆ ದೋಸೆ ತಿನ್ನುತ್ತಾರೆಂದು ಅವನು ಕೇಳಿದ್ದ. ಹಾಗೆ ಬಂದ ಜನಪ್ರಿಯ ವ್ಯಕ್ತಿಗಳು ಮಸಾಲೆ ದೋಸೆ ತಿನ್ನುವಾಗ ಬಣ್ಣದ ಫೋಟೊ ತೆಗೆದು ಗೋಡೆಯ ಮೇಲೆ ನೇಲಿಸುತ್ತಿದ್ದರು. ಗರಿಗರಿಯಾದ ಮಸಾಲೆ ದೋಸೆ. ಅದಕ್ಕಿಂತ ಹೆಚ್ಚು ಚಟ್ನಿ. ಅದರ ನೆನಪೇ ಅವನ ಬಾಯಿಯಲ್ಲಿ ನೀರೂರಿಸಿತು. ಹೊಟ್ಟೆಯಲ್ಲಿ ಗುಳುಗುಳು ಎಂದು ಹಸಿವೆ ಸದ್ದು ಮಾಡಿತು. ಒಂದು ಕಿಲೋ ಮೀಟರ್ ಅಂಥ ದೂರವೇನೂ ಅಲ್ಲ, ಒಂದು ಒಳ್ಳೆಯ ವಾಕ್ ಆಗುತ್ತದೆ, ಹೇಗೂ ಮನೆಯಲ್ಲಿ ಕಾಯುವ ಹೆಂಡತಿ ಇಲ್ಲವಲ್ಲ ಎಂದು ಅವನು ಮೇಲೆದ್ದು ನೀರಿನ ಬಾಟಲನ್ನು ಚೀಲಕ್ಕೆ ಹಾಕಿ ಪಾರ್ಕಿನಿಂದ ಹೊರಗೆ ಬಿದ್ದ.

ಅಪಾರ್ಟ್‌ಮೆಂಟಿನ ಒಳಗೆ ಕೆಲಸವೇನೂ ಆಗುತ್ತಿರಲಿಲ್ಲವಾದುದರಿಂದ ಅರ್ಧ ಕಟ್ಟಿದ ಕಟ್ಟಡ ತಟಸ್ಥವಾಗಿ ಪ್ರಶ್ನೆಯಂತೆ ನಿಂತಿತ್ತು. ಎದುರಿನ ಜೋಪಡಿಯ ಕೆಲಸಗಾರನಾಗಲೀ ಅವನ ಸಂಸಾರವಾಗಲೀ ಕಾಣಲಿಲ್ಲ. ದೋಸೆ ಹೋಟೆಲಿಗೆ ಹೋಗಬೇಕಾದರೆ ಅದನ್ನು ದಾಟಿಯೇ ಹೋಗಬೇಕು. ರಸ್ತೆ ಮೊದಲಿನಂತೆ ಖಾಲಿಖಾಲಿಯಾಗಿಯೇ ಇತ್ತು. ಯಾವುದೋ ಒಂದೆರಡು ಸ್ಕೂಟರ್‌ಗಳು ರುಂಯ್ ಎಂದು ಓಡಿದ್ದನ್ನು ಬಿಟ್ಟರೆ ಉಳಿದೆಲ್ಲ ಬಟಾಬಯಲು. ಅವನು ಮುಂದಕ್ಕೆ ಹೆಜ್ಜೆ ಹಾಕಿದ. ರಸ್ತೆಯ ಮುಂದಿನ ತಿರುವಿನಲ್ಲಿ ಎಡಕ್ಕೆ ತಿರುಗಿದಾಗ ಹುಳಿವಾಸನೆಯೊಂದು ಅವನ ಮೂಗಡರಿತು. ಅದು ಎಷ್ಟು ತೀಕ್ಷ್ಣವಾಗಿತ್ತೆಂದರೆ ಅವನು ಮೂಗನ್ನು ಮುಚ್ಚಿಕೊಂಡೇ ನಡೆಯಬೇಕಾಯಿತು. ಮೂಲೆಯಲ್ಲಿ ಕಾರ್ಪೋರೇಶನ್ನಿನ ಕಸದ ತೊಟ್ಟಿಯ ಸುತ್ತ ಗಲೀಜು, ಕಸ, ಪ್ಲಾಸ್ಟಿಕ್ ಚೀಲಗಳು, ಎಲೆಗಳು, ಸತ್ತ ಹೆಗ್ಗಣವೊಂದು ಹೀಗೆ ಎಲ್ಲ ರಸ್ತೆಯ ತುಂಬೆಲ್ಲ ದಂಡಿಯಾಗಿ ಬಿದ್ದಿದ್ದವು. ಪುಂಡು ದನವೊಂದು ಅಲ್ಲಿ ನಿಂತು ಬಾಯಿ ಆಡಿಸುತ್ತಿತ್ತು. ಪಕ್ಕದಲ್ಲಿಯೇ ಮೂರುನಾಲ್ಕು ಬೀದಿ ನಾಯಿಗಳು. ಎರಡೂ ಮೂತಿಕಟ್ಟಿದ ಪ್ಲಾಸ್ಟಿಕ್ ಚೀಲವನ್ನು ಎಳೆದು ಹರಿದು ತಮ್ಮ ತಮ್ಮ ಆಹಾರವನ್ನು ಹುಡುಕುತ್ತಿದ್ದವು.

ಅವನಿಗೆ ತನ್ನ ಚಿಕ್ಕಂದಿನಲ್ಲಿ ಕಲಿತ ಪಾಠವೊಂದರ ನೆನಪಾಯಿತು. ದನ ಎಮ್ಮೆಗಳು ತಮ್ಮ ಆಹಾರವನ್ನು ಸಿಕ್ಕಿದ ಕೂಡಲೇ ಗಬಗಬ ತಿಂದು ಹೋಗುತ್ತವೆ. ಆ ಮೇಲೆ ಸಾವಕಾಶವಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಾ ಒಳಗೆ ಹೋದ ಆಹಾರವನ್ನು ಮತ್ತೆ ಬಾಯಿಗೆ ತಂದು ಮೆಲುಕಾಡುತ್ತವೆ ಎಂದು. ಹಾಗೇನಾದರೂ ಗಬಗಬ ತಿನ್ನುವ ಗಡಿಬಿಡಿಯಲ್ಲಿ ಈ ದನ ಪ್ಲಾಸ್ಟಿಕ್ ಚೀಲವನ್ನು ಹೊಟ್ಟೆಯೊಳಗೆ ಹಾಕಿಕೊಂಡರೆ ಅದು ಪ್ರಾಣಕ್ಕೆ ಅಪಾಯ ತರಲಿಕ್ಕಿಲ್ಲವೇ ಎನ್ನಿಸಿತು. ಅದನ್ನು ಓಡಿಸಬೇಕೆಂದು ಅವನಿಗೆ ಆಸೆಯಾಯಿತು. ಆದರೆ ಅಲ್ಲಿಯ ವಾಸನೆ ಅವನಿಗೆ ಹತ್ತಿರ ಹೋಗುವುದೂ ಸಾಧ್ಯ ಮಾಡಿಸಲಿಲ್ಲ. ಅವನ ಗಮನ ಆ ಗಲೀಜಿನ ಹತ್ತಿರದಲ್ಲಿದ್ದ ಮನೆಗಳ ಮೇಲೆ ಹೋಯಿತು. ಇಷ್ಟು ವಾಸನೆ ಸುತ್ತ ಇರುವಾಗ ಅವರೆಲ್ಲ ಹೇಗೆ ಬದುಕುತ್ತಾರೋ ಎಂದು ಅವನು ಆತಂಕಪಟ್ಟು ಮುಂದೆ ಹೆಜ್ಜೆ ಹಾಕಿದ.